# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 112(144)
ಸದಸ್ಯರ ಹೆಸರು : ಶ್ರೀ ಚಿದಾನಂದ ಎಂ.ಗೌಡ (ಪದವೀಧರರ ಕ್ಷೇತ್ರದಿಂದ ಚುನಾಯಿತರಾದವರು)
ಉತ್ತರಿಸುವ ದಿನಾಂಕ : 14.02.2024
ಉತ್ತರಿಸುವ ಸಚಿವರು : ಕಂದಾಯ ಸಚಿವರು

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ತುಮಕೂರು ಜಿಲ್ಲೆ, ಶಿರಾ ತಾಲ್ಲೂಕು ಚಿಕ್ಕನಹಳ್ಳಿಯ ದಾನಿ ಶ್ರೀ ಉಗ್ರೇಗೌಡರು ಹಳೇ ಸರ್ವೆ ನಂ.1909 ಹೊಸ ಸರ್ವೆ ನಂ.202ರ 05 ಎಕರೆ 14 ಗುಂಟೆ ವಿಸ್ತೀರ್ಣ ಮತ್ತು ಹಳೆ ಸರ್ವೆ ನಂ.187/1 ಮತ್ತು 29 ಹೊಸ ಸರ್ವೆ ನಂ.199/4 ಮತ್ತು 5ರ 02 ಎಕರೆ ವಿಸ್ತೀರ್ಣದ ಜಮೀನುಗಳನ್ನು ಮಹಾರಾಜರ ಸರ್ಕಾರದ ಆದೇಶ ಸಂ:R4769-70/361-07-06 ದಿನಾಂಕ:11.01.1910 ರಂತೆ ಧರ್ಮಛತ್ರ ಮತ್ತು ಪಾಠಶಾಲೆ ಕಟ್ಟಲು ಜಮೀನುಗಳನ್ನು ಭೂ ಪರಿವರ್ತನೆಗೊಳಿಸಿ, ಕಂದಾಯ ವಜಾ ಮಾಡಿ ಜಿಲ್ಲಾಧಿಕಾರಿಗಳ ಸಂರಕ್ಷಣೆಯಲ್ಲಿ ಸರ್ಕಾರ ವಹಿಸಿಕೊಂಡಿರುವುದು ನಿಜವೇ; | ಹೌದು, ತುಮಕೂರು ಜಿಲ್ಲೆ, ಶಿರಾ ತಾಲ್ಲೂಕು, ಕಳ್ಳಂಬೆಳ್ಳ ಹೋಬಳಿ, ಚಿಕ್ಕನಹಳ್ಳಿ ಗ್ರಾಮದ ಸ.ನಂ.202ರ(ಹಳೇ ಸ.ನಂ.190ರ 5ಎ-14ಗು ವಿಸ್ತೀರ್ಣ) ಜಮೀನುಗಳನ್ನು ಮಹಾರಾಜರ ಸರ್ಕಾರದ ಆದೇಶ ಸಂಖ್ಯೆ: 5673-4-ಎಲ್ ಆರ್ 238-5-5, ದಿನಾಂಕ:29.11.2005 ರಂತೆ ಸಂತೆ ನಡೆಸಲು ಹಾಗೂ ಸರ್ಕಾರದ ಆದೇಶ ಸಂಖ್ಯೆ: ಆರ್ 4769-70/361-7-06, ದಿನಾಂಕ:11.01.1910 ರಂತೆ ಧರ್ಮಛತ್ರ ಮತ್ತು ಪಾಠಶಾಲೆ ಕಟ್ಟಲು ಜಮೀನುಗಳನ್ನು ಭೂ ಪರಿವರ್ತನೆಗೊಳಿಸಿ ಮಾನ್ಯ ಜಿಲ್ಲಾಧಿಕಾರಿಗಳ ಸಂರಕ್ಷಣೆಯಲ್ಲಿ ಸರ್ಕಾರವು ವಹಿಸಿಕೊಂಡಿರುವುದು ದಾಖಲಾತಿಗಳ ರೀತ್ಯಾ ಸತ್ಯವಾಗಿರುತ್ತದೆ. ಪ್ರಸ್ತುತವಾಗಿ ಸ.ನಂ.190, ಸ.ನಂ. 190/1, ಸ.ನಂ.190/10 ರವರೆಗೆ ಹಿಸ್ಸಾಗಳಾಗಿ ವಿಭಜನೆಗಳಾಗಿರುತ್ತದೆ. ಪ್ರಶ್ನಿತ ಸ.ನಂ. 199/5ರಲ್ಲಿ 1-00 ಎಕರೆ ಪ್ರದೇಶದಲ್ಲಿ ಅಗ್ರಿಕಲ್ಚರ್ ಸ್ಕೂಲ್ ಹೆಸರಿಗೆ ಹಾಲಿ ಪಹಣಿಯು ಚಾಲ್ತಿಯಲ್ಲಿದ್ದು, ಸದರಿ ಪ್ರದೇಶದಲ್ಲಿ ಶಾಲಾ ಕಟ್ಟಡವಿದ್ದು, ಸದರಿ ಶಾಲೆಯು ಸರ್ಕಾರಿ ಶಾಲೆಯಾಗಿದ್ದು, ಸರ್ಕಾರದ ವಶದಲ್ಲಿದ್ದು, ಉಳಿಕೆ ವಿಸ್ತೀರ್ಣಕ್ಕೆ ಹಾಲಿ ಪಹಣಿಯ ಖಾತೆಯ ರೀತ್ಯಾ ಖಾತೆದಾರರ ಹೆಸರಿಗೆ ಪಹಣಿಯು ಚಾಲ್ತಿಯಲ್ಲಿದ್ದು, |

| | | |
|---|---|---|
| | | ಮಾನ್ಯ ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ಆರ್‌ಪಿ 97/2015-16ರ ರೀತ್ಯಾ ಮೇಲ್ಮನವಿ ಪ್ರಕರಣವು ದಾಖಲಾಗಿದ್ದು, ವಿಚಾರಣಾ ಹಂತದಲ್ಲಿರುತ್ತದೆ. |
| ಆ) | ಹಾಗಿದ್ದಲ್ಲಿ, ಶ್ರೀ ಉಗ್ರೇಗೌಡರು 1912ರ ರಿಜಿಸ್ಟರ್ಡ್ ವಿಲ್‌ನಲ್ಲಿ ನಮೂದಿಸಿರುವಂತೆ ಯಾವ ಕಾರಣಕ್ಕೂ ಪರಭಾರೆಯಾಗದಂತೆ ಹಾಗೂ ಸರ್ಕಾರಿ ಆದೇಶ ಸಂಖ್ಯೆ:6436-50 A&1195-15-02 ದಿನಾಂಕ:06.05.1916ರಂತೆ ಈ ಆಸ್ತಿಗಳ ಸಂರಕ್ಷಣೆ ಹಾಗೂ ಈ ಪಾಠಶಾಲೆಯ ಆಡಳಿತವು ತುಮಕೂರು ಜಿಲ್ಲಾಧಿಕಾರಿಗಳ ಉಸ್ತುವಾರಿಯಲ್ಲಿಯೇ ಶಾಶ್ವತವಾಗಿ ಮುಂದುವರೆಯಬೇಕೆಂದು ಆದೇಶವಾಗಿದ್ದರೂ ಇಂದು ಈ ಶಾಲೆಗೆ ಬರುವ ದಾರಿಯೂ ಸೇರಿ ಪಾಠಶಾಲೆ ಕಟ್ಟಡಗಳಿರುವ ಸಂಪೂರ್ಣ ಜಮೀನು ಪರಭಾರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಸ.ನಂ.202, 1912 ರಿಜಿಸ್ಟರ್ ವಿಲ್‌ನಲ್ಲಿ ನಮೂದಿಸಿರುವಂತೆ ಯಾವ ಕಾರಣಕ್ಕೂ ಸದರಿ ಜಮೀನುಗಳು ಯಾರಿಗೂ ಪರಭಾರೆಯಾಗದಂತೆ ಹಾಗೂ ಈ ಜಮೀನುಗಳು ಸಂಪೂರ್ಣ ಈ ಪಾಠಶಾಲೆಗೆ ಸೇರಬೇಕೆಂದು ಮುಚ್ಚಳಿಕೆ ಬರೆದುಕೊಟ್ಟಿರುವ ಮೇರೆಗೆ ಸರ್ಕಾರಿ ಆದೇಶ ಸಂಖ್ಯೆ: ಆರ್4769-70/361-07-6, ದಿನಾಂಕ:11.01.1910ರ ಪ್ರಕಾರ ಆದೇಶವಾಗಿರುವುದು ಕಂಡು ಬಂದಿದ್ದು, ಸ.ನಂ. 202ರಲ್ಲಿ ಒಟ್ಟು ವಿಸ್ತೀರ್ಣ 5ಎ-10ಗು ಇದ್ದು 0-10 ಎ/ಗು ಪ್ರದೇಶದಲ್ಲಿ ಎಸ್ ಕೆಡಿವಿ ಹೆಚ್ ಎಸ್ ಶಾಲೆಯ ಹೆಸರಿಗೆ ಪಹಣಿ ಚಾಲ್ತಿಯಲ್ಲಿದ್ದು, ಸದರಿ ಪ್ರದೇಶದಲ್ಲಿ ಶಾಲಾ ಕಟ್ಟಡವಿದ್ದು, ಸದರಿ ಶಾಲೆಯು ಸರ್ಕಾರಿ ಶಾಲೆಯಾಗಿದ್ದು, ಸರ್ಕಾರದ ವಶದಲ್ಲಿರುತ್ತದೆ. ಉಳಿಕೆ ವಿಸ್ತೀರ್ಣಕ್ಕೆ ಹಾಲಿ ಪಹಣಿಯು ಖಾತೆದಾರರ ಹೆಸರಿಗೆ ಚಾಲ್ತಿಯಲ್ಲಿದ್ದು ಖಾತೆದಾರರಿಗೆ ಎಂಆರ್ :05/2001-02 ಮತ್ತು ಎಂಆರ್ ;ಹೆಚ್:6/2012-13ರ ರೀತ್ಯಾ ವಿಭಾಗ ಮತ್ತು ಪೌತಿ ವಾರಸು ಮೂಲಕ ಹಕ್ಕು ಬಂದಿದ್ದು, ಮಾನ್ಯ ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ಮೇಲ್ಮನವಿ ಪ್ರಕರಣವು ದಾಖಲಾಗಿದ್ದು, ವಿಚಾರಣಾ ಹಂತದಲ್ಲಿರುತ್ತದೆ. ಪ್ರಸ್ತಾಪಿತ ಪ್ರದೇಶವು ಪರಭಾರೆಯಾಗಿದ್ದು ಮೂಲ ಉದ್ದೇಶಕ್ಕೆ ಬಳಕೆಯಾಗದೇ ಇರುವುದು ಕಂಡು ಬರುತ್ತದೆ. |
| ಇ) | ಇನ್ನು ಮುಂದಾದರೂ ಈ ಅಕ್ರಮ ಒತ್ತುವರಿಯನ್ನು ತೆರವುಗೊಳಿಸಿ ಸರ್ಕಾರಿ ಆದೇಶ ಹಾಗೂ ದಾನಿಗಳ ಮೂಲ ಉದ್ದೇಶದಂತೆ ಸಕ್ರಮಗೊಳಿಸಲು ಸರ್ಕಾರವು ಕ್ರಮಕ್ಕೆಗೊಳ್ಳುವುದೇ? | ಪ್ರಸ್ತಾಪಿತ ಪ್ರದೇಶಕ್ಕೆ ಸಂಬಂಧಿಸಿದಂತೆ, ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ಆರ್‌ಪಿ:97/2015-16 ರಂತೆ ಮೇಲ್ಮನವಿ ಪ್ರಕರಣ ದಾಖಲಾಗಿ ವಿಚಾರಣಾ ಹಂತದಲ್ಲಿದ್ದು, ಸದರಿ ಪ್ರಕರಣದ |

| | | |
|---|---|---|
| | | ಅಂತಿಮ ಆದೇಶವಾದ ನಂತರ ಅಳತೆ ಕಾರ್ಯ ಕೈಗೊಂಡು ಅಳತೆಯಾದ ನಂತರ ಒತ್ತುವರಿಯಾಗಿರುವುದು ಕಂಡುಬಂದಲ್ಲಿ ಕಾನೂನು ರೀತ್ಯಾ ಒತ್ತುವರಿಯನ್ನು ತೆರವುಗೊಳಿಸಲು ನಿಯಮಾನುಸಾರ ಕ್ರಮವಹಿಸಲಾಗುವುದು. |

ಸಂಖ್ಯೆ: ಆರ್‌ಡಿ 20 ಎಲ್‌ಜಿಟಿ 2024

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು